## ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ - 03.02.2024

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | - | ಮಂಜುನಾಥ್ ಕುರಿ | ಪ್ರಾ.ಸಾ. | - | 18 |
| ತಂದೆಯ ಹೆಸರು | - | ಸಿದ್ದಪ್ಪ | ಚಾ.ಸಾ. | - | 25 |
| ವಯಸ್ಸು | - | 35 ವರ್ಷ | | | |
| ಉದ್ಯೋಗ | - | ಪಿ ಎಸ್ ಐ ಶಿರಾಳಕೊಪ್ಪ ಪೋಲೀಸ್ ಠಾಣೆ | | | |
| ವಾಸ ಸ್ಥಳ | - | ಶಿರಾಳಕೊಪ್ಪ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ವಿಶೇಷ ಸರ್ಕಾರಿ ಅಭಿಯೋಜಕರಿಂದ -**

1. ನಾನು ದಿಃ 29.02.2020 ರಿಂದ 30.03.2021 ರವರೆಗೆ ಚಿತ್ರಹಳ್ಳಿ ಗೇಟ್ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕೆಲಸ ಮಾಡಿದ್ದೇನೆ .

2. ದಿಃ 01.08.2020 ರಂದು ಸಂಜೆ 6 ಗಂಟೆಯಲ್ಲಿ ಚಾಸಾ 1 ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿಕೊಂಡು ಮೊಕದ್ದಮೆ ನಂಬರ್ 78/20 ರಲ್ಲಿ ಐಪಿಸಿ ಕಲಂ 143, 147 , 148, 447, 448, 427, 436, 354 - ಬಿ , 307, 380, 504 , 506 ಸಹವಾಚಕ 149 ಮತ್ತು 301 ಎಫ್ , ಜಿ ,ಆರ್ , ಎಸ್ , ಡಬ್ಲ್ಯೂ(1)(2), 3(2) (5) ಎಸ್ ಸಿ /ಎಸ್ ಟಿ ದೌರ್ಜನ್ಯ ತಡೆ ಕಾಯಿದೆ ಅಡಿ ಪ್ರಕರಣ ದಾಖಲಿಸಿ ಪ್ರ ವ ವರದಿ ಸಲ್ಲಿಸಿರುತ್ತೇನೆ . ಸಾಕ್ಷಿ ನಿಪಿ-8 ನ್ನು ನೋಡಿ ದೂರು ಎಂದು ಗುರುತಿಸಿದ್ದು ಅದರಲ್ಲಿನ ಸಹಿ ನಿಪಿ8(ಬಿ ) ಎಂದು , ಪ್ರ ವ ವರದಿ ನಿಪಿ-31 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು 32 (ಎ)

ಎಂದು ಗುರುತಿಸಲಾಗಿದೆ. ಅದೇ ದಿನ ಸದರಿ ಪ್ರಕರಣದ ಕಡವನ್ನು ಮುಂದಿನ ತನಿಖೆಗಾಗಿ ಚಾಸಾ–26 ರವರಿಗೆ ನೀಡಿರುತ್ತೇನೆ .

3.ದಿಃ 02.08.2020 ರಂದು ಆರೋಪಿಗಳ ಪತ್ತೆಗಾಗಿ ತನಿಖಾಧಿಕಾರಿಯವರು ಸೂಚಿಸಿದ್ದು ಅದೇ ದಿನ ಮಧ್ಯಾಹ್ನ 12.30 ಗಂಟೆಯಲ್ಲಿ ಹೆಚ್.ಡಿ ಪುರ ಬಸ್ ನಿಲ್ದಾಣದಲ್ಲಿ ಆರೋಪಿಗಳಾದ ಕೆಂಚಪ್ಪ , ಪ್ರಶಾಂತ ರವರನ್ನು ವಶಕ್ಕೆ ಪಡೆದು , ತನಿಖಾಧಿಕಾರಿಯವರ ಮುಂದೆ ಮಧ್ಯಾಹ್ನ 1 ಗಂಟೆಗೆ ಹಾಜರುಪಡಿಸಿರುತ್ತೇನೆ . ವರದಿ ನೀಡಿರುತ್ತೇನೆ . ಸಾಕ್ಷಿ ಸದರಿ ವರದಿ ಹಾಗೂ ಸಹಿ ಗುರುತಿಸಿದ್ದು ಅವುಗಳನ್ನು ನಿಪಿ 32 , ನಿಪಿ –32(ಎ) ಎಂದು ಗುರುತಿಸಲಾಗಿದೆ.

ಸಾಕ್ಷಿ ನ್ಯಾಯಾಲಯದ ಮುಂದಿರುವ ಸದರಿ ಆರೋಪಿಳನ್ನು ನೋಡಿ ಗುರುತಿಸಿರುತ್ತಾರೆ .

**– ಪಾಟೀ ಸವಾಲು – 1 ರಿಂದ 11 ನೇ ಆರೋಪಿಗಳ ಪರವಾಗಿ – ಶ್ರೀ ಬಿ.ಎ.ಕೆ ವಕೀಲರಿಂದ –**

4. ದೂರು ದಾಖಲಾಗುವ ಮೊದಲು ಆಸ್ಪತ್ರೆಯಿಂದ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಸೂಚನೆ ಬಂದಿರಲಿಲ್ಲ . ಕ್ರೈಂ.ನಂ 77/20 ರಲ್ಲಿ ಪಿರ್ಯಾದಿ ಗಂಡನ ವಿರುದ್ಧ ನಿಮ್ಮ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ . ಆರೋಪಿಗಳ ಫೋಟೋವನ್ನು ನನಗೆ ನೀಡಿರಲಿಲ್ಲ . ಆರೋಪಿಗಳ ಗುರುತಿನ ಚೀಟಿಯನ್ನು ನಾನು ಪರಿಶೀಲಿಸಲಿಲ್ಲ . ದೂರು ನೀಡುವಲ್ಲಿ ವಿಳಂಭವಾಗಿರುವ ಬಗ್ಗೆ ನಾನೇನು ಕಾರಣ ಕೇಳಲಿಲ್ಲ . ಕೋವಿಡ್ ಕಾರಣದಿಂದ ಪ್ರ ವ ವರದಿ ನ್ಯಾಯಾಲಯಕ್ಕೆ ಸಲ್ಲಿಸುವಲ್ಲಿ ವಿಳಂಭವಾಗಿದೆ . ಚಾಸಾ 1 ರವರ ವಿರುದ್ಧ ಪ್ರಕರಣ ದಾಖಲಾಗಿರುವ ವಿಚಾರ ಗೊತ್ತಿದ್ದು , ಚಾಸಾ1ರ ವರಿಗೆ ಸಹಾಯಮಾಡಲು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ

ಸರಿಯಲ್ಲ. ಆರೋಪಿಗಳನ್ನು ಹೆಚ್.ಡಿ ಪುರದಲ್ಲಿ ವಶಕ್ಕೆ ಪಡೆದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸದರಿ ಆರೋಪಿಗಳು ನಮ್ಮ ಠಾಣೆಗೆ ತಾವು ನೀಡಿದ್ದ ದೂರಿನ ಬಗ್ಗೆ ಕೇಳಲು ಬಂದಾಗ ಅವರನ್ನು ದಸ್ತಗಿರಿ ಮಾಡಿದ್ದೇನೆ ಎಂದರೆ ಸರಿಯಲ್ಲ . ಚಾಸಾ1 ದೂರು ನೀಡಲು ಬಂದಾಗ ಸುಮಾರು ಅರ್ಧ ಗಂಟೆ ಠಾಣೆಯಲ್ಲಿ ಇದ್ದರು . ಪ್ರ ವ ವರದಿಯಲ್ಲಿ ಚಾಸಾ 1 ರವರ ಸಹಿ ಪಡೆದಿಲ್ಲ ಎಂದರೆ ಸರಿ .

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.